## ತಪ್ಪಾಯ್ತು ತಿದ್ಕೋತೀವಿ

■ ವಿಶ್ವೇಶ್ವರ ಭಟ್

**ಕಾ**ರ್ಗಿಲ್ ಯುದ್ಧ ಮುಗಿದು 12 ವರ್ಷವಾಗಿದೆ. ಈಗ ಮಲ್ಲೇಶ್ವರಂನ ವಿಜಯಲಕ್ಷ್ಮಿಯವರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ಸಂಖ್ಯೆ ಎಷ್ಟು? ಎಂಬ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಕಾರಣವೂ ಇದೆ. ಜು.23ರ ಪ್ರವಾಸಪ್ರಭದಲ್ಲಿ ಮತ್ತು ಜು.26ರಂದು ಪ್ರಕಟವಾದ ಕಾರ್ಗಿಲ್ ಯೋಧರಿಗೆ ಸಂಬಂಧಿಸಿದ ಸುದ್ದಿಯಲ್ಲಿ ಹುತಾತ್ಮರಾದ ಯೋಧರ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಇಷ್ಟೇ ಆಗಿದ್ದರೆ ಸಹಿಸಿಕೊಳ್ಳುತ್ತಿದ್ದರೇನೊ. ಆದರೆ ಒಂದೇ ದಿನ (ಜು.23ರ) ಪ್ರವಾಸಪ್ರಭದಲ್ಲಿ 2 ಕಡೆ ಹುತಾತ್ಮಯೋಧರ ಬೇರೆ ಬೇರೆ ಸಂಖ್ಯೆ ನೀಡಲಾಗಿದೆ!

ಒಂದು ಕಡೆ 513 ಮಂದಿ ಎಂದು ಬರೆದಿದ್ದರೆ, ಇನ್ನೊಂದೆಡೆ 579 ಎಂದು ಬರೆಯಲಾಗಿದೆ. ಜು.26ರಂದು ಕಾರ್ಗಿಲ್ ಹುತಾತ್ಮರ ದಿನದ ದಿನ ಪ್ರಕಟವಾದ ಲೇಖನದಲ್ಲಿ 527 ಎಂದು ಪ್ರಕಟಿಸಲಾಗಿದೆ. ಇದರಲ್ಲಿ ಯಾವುದು ಸರಿ? ಎಂಬುದು ಅವರ ಪ್ರಶ್ನೆ. ಇದರಲ್ಲಿ 527 ಸರಿಯಾದ ಸಂಖ್ಯೆ. ಉಳಿದ ಅಂಕಿಗಳು ತಪ್ಪಾಗಿವೆ. ತಿದ್ಕೋತೀವಿ.

ಪದ್ಮನಾಭ ನಗರದಿಂದ ಇನ್ನೊಬ್ಬ ವಿಜಯಲಕ್ಷ್ಮಿಯವರು ಪತ್ರ ಬರೆದಿದ್ದಾರೆ. ಅವರು ಸದ್ಯ ಸುದ್ದಿಯಲ್ಲಿರುವ ಲೋಕಾಯುಕ್ತರ ಬಗ್ಗೆ ಬಳಸಿದ ಶೀರ್ಷಿಕೆ ಯುಕ್ತವೇ? ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ. ಜು.22ರ (ಮುಖಪುಟ) ಪತ್ರಿಕೆಯಲ್ಲಿ 'ಈ ಕಣ್ಣೀರಿಗೆ ಬೆಲೆಯಿಲ್ಲವೇ' ಶೀರ್ಷಿಕೆಯ ಅಡಿಯಲ್ಲಿ 'ವಿದಾಯದ ಅಂಚಿನಲ್ಲಿ, ವಿಷಾದದ ಸಂಚು' ಎಂದು ಪ್ರಕಟಿಸಿದ್ದೀರಿ. ಲೋಕಾಯುಕ್ತರ ವಿಷಾದದಲ್ಲಿರುವ ಸಂಚು ಏನು? ದುರುದ್ದೇಶ ಇರಿಸಿಕೊಂಡು ಹಾಕುವ ಸ್ಕೆಚ್ ಅಥವಾ ಪ್ಲಾನ್‌ಗೆ ಸಂಚು ಅನ್ನಬಹುದು. ಅಂತಹ ಶಬ್ದವನ್ನು ಲೋಕಾಯುಕ್ತರ ವಿಷಯದಲ್ಲಿ ಬಳಸಿದ್ದು ಸರಿಯಲ್ಲ ಎಂಬುದು ಅವರ ಕಳಕಳಿ. ಖಂಡಿತ ಇದನ್ನು ಅವರಂದುಕೊಂಡ ಅರ್ಥದಲ್ಲಿ ಬಳಸಿದ್ದಲ್ಲ. ಲೋಕಾಯುಕ್ತರು ವಿದಾಯದ ಅಂಚಿನಲ್ಲಿರುವಾಗ, ಅವರಿಗೆ ವಿಷಾದ ತರುವಂತಹ ಸಂಚು ನಡೆದಿದೆ ಎಂಬರ್ಥದಲ್ಲಿ ಬಳಸಲಾಗಿದೆ. ಸ್ಥಳಾಭಾವದಿಂದ ಸಂಕ್ಷಿಪ್ತವಾಗಿ 'ವಿದಾಯದ ಅಂಚಿನಲ್ಲಿ ವಿಷಾದದ ಸಂಚು' ಎಂದು ಬರೆಯಲಾಗಿದೆ ಹೊರತು ಲೋಕಾಯುಕ್ತರು ಸಂಚು ರೂಪಿಸಿದ್ದಾರೆ ಎಂಬರ್ಥದಲ್ಲಲ್ಲ. ಅರ್ಥ ಮಾಡಿಕೊಳ್ಳುವಲ್ಲೇ ತಪ್ಪಾಗಿದೆ. ತಿದ್ದಿಕೊಳ್ಳಿ ಅಂದು ಹೇಳಬೇಕಾಗಿದೆ.

ಓದುಗರು ಪತ್ರಿಕೆಯಲ್ಲಿ ತಪ್ಪುಗಳನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತಾರೆಂಬುದಕ್ಕೆ ಇಲ್ಲಿದೆ ನೋಡಿ ಉತ್ತಮ ಉದಾಹರಣೆ. ಓದುಗರು ಹಾಸ್ಯವನ್ನು ಕೇವಲ ನಗುವುದಕ್ಕಷ್ಟೇ ಸೀಮಿತಗೊಳಿಸಿಲ್ಲ. ಹಾಸ್ಯವಾದ್ದರಿಂದ ಏನು ಬರೆದರೂ ನಡೆಯುತ್ತದೆ ಅಂದುಕೊಂಡಿದ್ದರೆ ಅದು ತಪ್ಪು. ವೈಎನ್‌ಕೆ ಕನ್ನಡಪ್ರಭದ ಸಂಪಾದಕರಾಗಿದ್ದಾಗ ವಂಡರ್‌ಕಣ್ಣು ಅಂಕಣದಲ್ಲಿ 'ಶ್ರೀಮಾನ್ ಘಾ' ಎಂಬ ಹೆಸರು, ವ್ಯಕ್ತಿಯನ್ನು ಸೃಷ್ಟಿಸಿದ್ದರು. ಹಾಗೆಯೇ ಕೋಲ್ಯ ಕೂಡ ಕನ್ನಡಪ್ರಭದ ಸೃಷ್ಟಿ. ಬೇರೆಲ್ಲೂ ಕೋಲ್ಯನ ಹೆಸರಿನಲ್ಲಿ ಜೋಕುಗಳಿಲ್ಲ. ಜು.21ರಂದು 'ಕಿರುನಗೆ' ಅಂಕಣದಲ್ಲಿ ಪ್ರಕಟವಾದ ಕೋಲ್ಯನ ಹಾಸ್ಯ ಪ್ರಸಂಗವೊಂದರಲ್ಲಿ 'ಇಂಟ್ರೆಸ್ಟ್' ಎಂದು ಬರೆಯುವಲ್ಲಿ 'ಇಟ್ರೆಸ್ಟು' ಎಂದು ತಪ್ಪಾಗಿ ಪ್ರಕಟವಾಗಿದೆ ಎಂದು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ನಿವಾಸಿ ಜಿ. ಶೇಷು ಪತ್ರ ಬರೆದು ತಿಳಿಸಿದ್ದಾರೆ. ಅವರ 'ಇಂಟ್ರೆಸ್ಟು' ಮೆಚ್ಚಬೇಕಾದ್ದು.

## ಕೇಳ್ರಪ್ಪೋ ಕೇಳಿ

■ ಬಾಣಭಟ್ಟ

ಸವಿತಾ ಎನ್, ಹಿರೇಹಳ್ಳಿ

**● ಯಡಿಯೂರಪ್ಪನವರನ್ನು ಕುರ್ಚಿಯಿಂದ ಕೆಳಗಿಳಿಸುವುದು ಹೇಗೆ?**

ಅದೇ ಬಂದಿರೋದು ಕಷ್ಟ. ಅವರು ಕುರ್ಚಿಯನ್ನೇ ತಲೆ ಮೇಲಿಟ್ಟುಕೊಂಡು ಬಿಟ್ಟಿದ್ದಾರೆ.



ಮಾಯಾ ಸುಘೋಷ್, ಬೆಂಗಳೂರು

**● ಬಿಜೆಪಿಯಲ್ಲಿ ಹೈಕಮಾಂಡ್ ಎಂಬುದೇನಾದರೂ ಇದೆಯಾ?**

ಅದನ್ನು ಯಡಿಯೂರಪ್ಪನವರು ಹೈ'ಕಮೋಡ್' ಎಂದು ಭಾವಿಸಿದಂತಿದೆ!

ರಾಜಕುಮಾರ, ಗುಲ್ಬರ್ಗ

**● ಸದಾನಂದಗೌಡ ಮುಖ್ಯಮಂತ್ರಿಯಾದರೆ ರಾಜ್ಯದ ಗತಿ?**

ಅಧೋಗತಿ!

ಮುರುಳೀಧರ, ಬೆಂಗಳೂರು

**● ಇಷ್ಟೆಲ್ಲ ರಾಜಕೀಯ ಬೆಳವಣಿಗೆ ಆದರೂ 'ಕೇಶವ ಕೃಪ'ದವರು ಸುಮ್ಮನಿದ್ದಾರಲ್ಲ?**

ಮೂರು ವರ್ಷ ಸುಮ್ಮನಿದ್ದು ಅವರಿಗೆ ಅಭ್ಯಾಸವಾಗಿ ಹೋಗಿದೆ.

ಮಧು, ಫ್ಯಾಷನ್ ಡಿಸೈನರ್, 99457 37427

**● ತುಂಬಾ ಬುದ್ಧಿವಂತರು ಕೂಡಾ 'ಪ್ರೀತಿ–ಪ್ರೇಮ'ದ ವಿಷಯದಲ್ಲಿ ದಡ್ಡರಾಗುತ್ತಾರಲ್ಲ ಏಕೆ?**

ಯಾವ ಪರಿ ದಡ್ಡರಾಗುತ್ತಾರೆ ಅಂತೀರಾ, ಪ್ರೀತಿಸಲು ಹೋಗಿ ಸಂಸಾರಕ್ಕೇ ಕಟ್ಕೊಂಡ್ ಬಿಡ್ತಾರೆ!

## ಹಿರಿಯರ ಹಾದಿ

■ ಪ್ರೊ. ಎಂ. ಎನ್. ಸುಂದರರಾಜ್, ಶಿವಮೊಗ್ಗ

### ಬೋಸರಿಗೆ ಸಹಕರಿಸದ ಗಾಂಧೀಜಿ

**ಸು**ಭಾಷ್‌ಚಂದ್ರ ಬೋಸರು ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲುದೊಡ್ಡ ಪಾತ್ರ ವಹಿಸಿದ್ದರು. ಭಾರತದ ಇತಿಹಾಸ ಬೋಸರ ಕೊಡುಗೆ ಇಲ್ಲದೆ ಕಲ್ಪಿಸಲೂ ಸಾಧ್ಯವಿಲ್ಲ. 1938ರವರೆಗೆ ಅವರು ಕಾಂಗ್ರೆಸ್ಸಿನ ಕಾರ್ಯಕಾರಿಣಿ ಸಭೆಗಳಲ್ಲೂ ತಮ್ಮ ಯಾವುದೇ ವೈಯಕ್ತಿಕ ನಿಲುವುಗಳನ್ನು ಮುಂದೊತ್ತದೆ ಸಾಮರಸ್ಯದಿಂದ ವ್ಯವಹರಿಸಿದರು. 1939ರಲ್ಲಿ ಮರುವರ್ಷದ ಅವಧಿಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ತಾವು ಅಭ್ಯರ್ಥಿಯಾಗಿ ನಿಲ್ಲುವುದಾಗಿ ತಿಳಿಸಿದರು. ಸರ್ದಾರ್ ಪಟೇಲರು, ರಾಜೇಂದ್ರ ಪ್ರಸಾದ್ ಮುಂತಾದ ಏಳು ಜನ ಕಾರ್ಯಕಾರಿ ಸಮಿತಿ ಸದಸ್ಯರು ಪ್ರತಿ ಹೇಳಿಕೆಯೊಂದನ್ನು ನೀಡಿ ಅದರಲ್ಲಿ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಸರ್ವಾನುಮತದಿಂದ ಆಗುವುದೆಂದೂ, ಈ ಸ್ಥಾನಕ್ಕೆ ಡಾ. ಪಟ್ಟಾಭಿಸೀತಾರಾಮಯ್ಯನವರ ಹೆಸರನ್ನು ಸೂಚಿಸಿದರು. ಇದಕ್ಕೆ ಗಾಂಧೀಜಿಯವರ ಸಹಮತವೂ ಇತ್ತು. ಹೀಗಾಗಿ ಬೋಸರು ಮತ್ತು ಸೀತಾರಾಮಯ್ಯನವರ ನಡುವೆ ಸ್ಪರ್ಧೆಯಾದರೂ ಇದು ಬೋಸರು ಮತ್ತು ಗಾಂಧೀಜಿಯವರ ನಡುವೆ ನಡೆದ ಸ್ಪರ್ಧೆಯೆಂದೇ ಎಲ್ಲರೂ ಭಾವಿಸುವಂತಾಯಿತು. ನೆಹರೂರವರು ಬೋಸರು ಸ್ಪರ್ಧೆಯಿಂದ ನಿವೃತ್ತರಾಗಬೇಕೆಂದು ಸಲಹೆ ನೀಡಿದರು. ಗಾಂಧೀಜಿಯವರು ಒಂದು ನಿಲುವನ್ನು ತಳೆದರೆಂದರೆ ಅದಕ್ಕೆ ವಿರುದ್ಧವಾಗಿ ಯಾರೂ ನಡೆದಾರೆಂಬುದು ಆ ದಿನಗಳಲ್ಲಿ ಅಪರೂಪವಾಗಿತ್ತು.



ಹೆಚ್ಚು ಜನರು ನಿರೀಕ್ಷಿಸಿದ್ದು ಗಾಂಧಿಯವರ ಪರೋಕ್ಷ ಬೆಂಬಲ ಪಡೆದ ಅಭ್ಯರ್ಥಿಯೇ ಗೆಲ್ಲುವರೆಂದು. ಅಲ್ಲದೇ ಆರೇಳು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದುದರಿಂದ ತನ್ನ ಬಲವನ್ನೆಲ್ಲಾ ಗಾಂಧಿಯವರ ಪರವಾಗಿ ತೊಡಗಿಸುವುದು ನಿಶ್ಚಿತವಿತ್ತು. ಮತದಾನ ನಡೆದು ಫಲಿತಾಂಶ ಪ್ರಕಟವಾದಾಗ ಎಲ್ಲರಿಗೂ ದಿಗ್ಭ್ರಮೆಯಾಯಿತು. ಬೋಸರ ಪರವಾಗಿ 1580 ಮತಗಳೂ, ಸೀತಾರಾಮಯ್ಯನವರ ಪರವಾಗಿ 1375 ಮತಗಳು ಬಿದ್ದಿದ್ದವು.

ಗಾಂಧಿಯವರನ್ನು ಅವರ ಅನುಚರರನ್ನು ವಿರೋಧಿಸಿ ಯಾರಾದರೂ ಗೆದ್ದಾರು ಎಂಬುದು ಆಗಿನ ಪರಿಸರದಲ್ಲಿ ಕಲ್ಪಿಸಿಕೊಳ್ಳಲೂ ಆಗದಿದ್ದ ಸಂಗತಿ. ಗಾಂಧೀಜಿಯವರಿಗೆ ಅಚ್ಚರಿ, ಜೊತೆಗೆ ಆಕ್ರೋಶ, ಅವರ ಮುಖಕಳೆಗುಂದಿತ್ತು. ಅವರು ಒಂದು ಹೇಳಿಕೆ ನೀಡಿ ಬಹುಮತದಿಂದ ಚುನಾಯಿತರಾದ ಅಧ್ಯಕ್ಷರೊಡನೆ ಸಹಕರಿಸದೆ ನೀವೆಲ್ಲಾ ಪಕ್ಷ ಬಿಟ್ಟು ಹೊರಬನ್ನಿ ಎಂದು ಕರೆ ನೀಡಿದರು. ಇದೊಂದು ಪ್ರಜಾತಂತ್ರದ ಗುಣವೆನ್ನಲಾಗದು ಎಂದು ಭಾವಿಸಿದ ಬೋಸರು "ಮಹಾತ್ಮಗಾಂಧಿಯವರು ಇದನ್ನು ತಮ್ಮ ವೈಯಕ್ತಿಕ ಸೋಲೆಂದು ಪರಿಗಣಿಸಿದುದು ನನಗೆ ಬಹಳ ನೋವನ್ನುಂಟು ಮಾಡಿದೆ" ಎಂದು ತಿಳಿಸಿದರು. ಅದೇ ಸಮಯಕ್ಕೆ ಕಾಂಗ್ರೆಸ್ ಕಾರ್ಯಕಾರಿಣಿಯ ಎಲ್ಲಾ ಸದಸ್ಯರೂ ಸಾಮೂಹಿಕ ರಾಜಿನಾಮೆ ನೀಡಿದರು. ಇದರಿಂದ ಖಿನ್ನರಾದ ಬೋಸರು ಗಾಂಧೀಜಿಯೊಡನೆ ಮಾತುಕತೆ ನಡೆಸಿ ಕಾರ್ಯಕಾರಿಣಿಗೆ ಸದಸ್ಯರನ್ನು ಸೂಚಿಸುವಂತೆ ಕೋರಿದರು. ಗಾಂಧೀಜಿ ಬೋಸರಿಗೆ ಯಾವ ಸಹಕಾರ ನೀಡಲೂ ಸಿದ್ಧರಿರಲಿಲ್ಲ. ಇದರಿಂದ ಬೇಸರಗೊಂಡ ಬೋಸರು 1938ರ ಏಪ್ರಿಲ್ 29ರಂದು ತಮ್ಮ ಸ್ಥಾನಕ್ಕೆ ಅನಿವಾರ್ಯವಾಗಿ ರಾಜಿನಾಮೆ ನೀಡಿದರು. ನಂತರ ಅವರು "ಫಾರ್ವರ್ಡ್ ಬ್ಲಾಕ್" ಪಕ್ಷ ಸ್ಥಾಪಿಸಿದ್ದು ಇತಿಹಾಸ.

# ಬಿಜೆಪಿಯನ್ನು ಬಯ್ಯುವವರ ಎದೆಯಲ್ಲಿರುವುದು ಕುಹಕವಲ್ಲ, ಯಾತನೆ

**ಸ್ವಾತಂತ್ರ್ಯದ ನಂತರ ರಾಷ್ಟ್ರದಲ್ಲಿ ಹಲ ದಶಕಗಳ ಕೆಟ್ಟ ಆಡಳಿತಕ್ಕೆ ಉತ್ತರ ಕಂಡುಕೊಳ್ಳಲು ಬಿಜೆಪಿ ಕಡೆ ಮುಖ ಮಾಡಿದ್ದ ಮತದಾರನಿಗೆ ಕಠೋರ ವಾಸ್ತವವೊಂದು ಇರಿಯುತ್ತಿದೆ. ಅದೆಂದರೆ ಬಿಜೆಪಿ ಈಗ ಆಡ್ವಾಣಿಯಂಥ ಸ್ಟೇಟ್ಸ್‌ಮನ್‌ಗಳ ಜಮಾನಾದಿಂದ ನಿತಿನ್ ಗಡ್ಕರಿ ಅವರಂಥ ಬಿಸಿನೆಸ್‌ಮನ್‌ಗಳ ಕಾಲಕ್ಕೆ ಜಾರುತ್ತಿದೆ**

**'ಲೋ**ಕಾಯುಕ್ತ ಒಂದು ಸಂವಿಧಾನಿಕ ಸಂಸ್ಥೆ. ಅದು ನೀಡುವ ವರದಿಯನ್ನು ಯಾರೇ ಆಗಲಿ ಗೌರವಿಸಲೇಬೇಕಾಗುತ್ತದೆ. ತನಿಖೆಯಲ್ಲಿ ಹೆಸರಿಸಲಾಗಿರುವ ಎಲ್ಲರ ಬಗ್ಗೆಯೂ ತನಿಖೆ ಆಗಬೇಕು. ನಾವು ಸರ್ಕಾರದಲ್ಲೇ ಇರಲಿ, ಮುಂಬರುವ ದಿನಗಳಲ್ಲಿ ವಿಪಕ್ಷ ಸ್ಥಾನದಲ್ಲೇ ಇದ್ದಿರಲಿ ರಾಜ್ಯದ ಹಿತದೃಷ್ಟಿಯಿಂದ ಈ ವರದಿ ತಾರ್ಕಿಕ ಅಂತ್ಯ ಕಾಣುವಂತೆ ನೋಡಿಕೊಳ್ಳುತ್ತೇವೆ. ಗಣಿಗಾರಿಕೆಯಲ್ಲಿ ಬೇರೆ ಪಕ್ಷಗಳವರು, ಈ ಹಿಂದಿನ ಮುಖ್ಯಮಂತ್ರಿಗಳು ಹಣ ಮಾಡಿಕೊಂಡಿಲ್ಲವೇ ಎಂಬುದು ಅತ್ಯಂತ ಪ್ರಸ್ತುತ ಪ್ರಶ್ನೆಯೇ ಆದರೂ ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಇರುವವರ ಮೇಲೆಯೇ ಆರೋಪ ಇರುವುದರಿಂದ ಅಂಥ ತರ್ಕಗಳಲ್ಲಿ ನಾವು ದಿನ ದೂಡುವುದಿಲ್ಲ. ಮುಖ್ಯಮಂತ್ರಿ ರಾಜಿನಾಮೆ ನಮ್ಮ ಮೊದಲ ಆದ್ಯತೆ. ಇದರ ಬೇರೆ ಬೇರೆ ಆಯಾಮಗಳ ಬಗ್ಗೆ ನಂತರ ಮಾತನಾಡುತ್ತೇವೆ...'

– ಬಿಜೆಪಿಯ ಯಾವುದೇ ನಾಯಕರಿಂದ ಈ ಸಮಯದಲ್ಲಿ ಈ ಅರ್ಥದ ಹೇಳಿಕೆಯೊಂದು ಬಂದಿದ್ದರೆ ಏನಾಗುತ್ತಿತ್ತು? ಖಂಡಿತ, ಅದರಿಂದ ಬಿಜೆಪಿ ಕಳೆದುಕೊಳ್ಳುವಂಥದ್ದು ಏನೂ ಇರಲಿಲ್ಲ. ಆದರೆ ಪಕ್ಷದ ವರ್ಚಸ್ಸು ಇನ್ನಿಲ್ಲದಂತೆ ಪಾತಾಳಕ್ಕೆ ಇಳಿಯುತ್ತಿರುವ ಈ ಸಂದರ್ಭದಲ್ಲಿ ಈ ಬಗೆಯ ಮಾತುಗಳಿಂದ ಅಷ್ಟಾದರೂ ಸಹಾನುಭೂತಿ ಉಳಿದುಕೊಳ್ಳುತ್ತಿತ್ತು.

ಇವತ್ತಿನ ತುರುಸು–ಬಿರುಸುಗಳ ರಾಜಕೀಯದಲ್ಲಿ ಇವೆಲ್ಲ ಕೇವಲ ಉಪದೇಶ ಕೊಡಬಹುದಾದ ಮಾತುಗಳು ಎನಿಸುತ್ತಿವೆಯಾ? ಹಣದ ಮೇಲಾಟವೇ ನಿರ್ಣಾಯಕ ಎನಿಸಿರುವ ಇಂದಿನ ಕಾಲಘಟ್ಟದಲ್ಲಿ ಇವೆಲ್ಲ ಲೆಕ್ಕಕ್ಕೆ ಬರುವ ಮಾತುಗಳಲ್ಲ ಎಂಬ ಅನುಮಾನ ಇನ್ನೂ ಯಾರಲ್ಲಾದರೂ ಉಳಿದಿದ್ದರೆ ಕೆಲವೇ ದಿನಗಳ ಹಿಂದೆ ಕಣ್ಣು ಹೊರಳಿಸಿದರೆ ಸಾಕಷ್ಟೆ.

ಬಿಜೆಪಿ ಅಧಿಕಾರ ಸೂತ್ರ ಹಿಡಿಯುವ ಹಂತದಲ್ಲಿ ಪ್ರತ್ಯಕ್ಷರಾಗಿದ್ದ ರೆಡ್ಡಿಗಳ ಠೀವಿ ಆಗ ಹೇಗಿತ್ತು? ಸರ್ಕಾರವನ್ನೇ ಅಲ್ಲಾಡಿಸಿಬಿಡುವ ತಾಕತ್ತು. ಹೆಲಿಕಾಪ್ಟರ್‌ನಲ್ಲೇ ಓಡಾಡುವ ಗತ್ತು. ಅಂಥವರನ್ನೂ ಮಕ್ಕಳೆಂದು ಹೇಳಿ ಸುಖಾಸುಮ್ಮನೇ ಹೆಗಲು ತಟ್ಟುತ್ತಿದ್ದ ಹೈ ಕಮಾಂಡ್‌ನ ಅಮ್ಮ. ಅವರು ಬಂದರೆಂದರೆ ಬೆನ್ನಿಗೆ ಹತ್ತು ಸ್ಕಾರ್ಪಿಯೋಗಳು, ಒಂದಿಷ್ಟು ಗನ್‌ಮ್ಯಾನ್‌ಗಳು ಪ್ರತ್ಯಕ್ಷರಾಗುತ್ತಿದ್ದ ರಾಜಕಾರಣದ ಹೊಸ ಶೈಲಿ. ಅವರು ಕುಂತಿದ್ದು, ನಿಂತಿದ್ದನ್ನೂ ಪುಟಗಟ್ಟಲೇ ವರ್ಣಿಸಿ ಕಲಿಯುಗದ ಧರ್ಮಾತ್ಮರಂತೆ ಬಿಂಬಿಸಿ ಪರಾಕು ಹೇಳುತ್ತಿದ್ದ ನೀಲಿ ಪತ್ರಕರ್ತರು.... ಇವರದ್ದೇ ಜಮಾನಾ ಬಿಡಿ ಎಂಬ ಹತಾಶೆ ಕಾಡಿದ್ದು ನಿಜ. ಹಣಬಲ, ಅಧಿಕಾರ ಬಲ ಎರಡನ್ನೂ ಹೊಂದಿ ವಿಜೃಂಭಿಸುತ್ತಿದ್ದ ಈ ಗಣಿಕುಳಗಳ ಬಗ್ಗೆ ಪ್ರತಾಪ ಸಿಂಹ 'ಮೈನಿಂಗ್ ಮಾಫಿಯಾ' ಪುಸ್ತಕ ಹೊರತರುವ ಸಂದರ್ಭದಲ್ಲಿ ಅವರ ಹತ್ತಿರದವರಿಗೆ ಇದೇಕೆ ಸುಮ್ಮನೇ ಅಪಾಯ ಮೈಗೆಳೆದುಕೊಳ್ಳುವ ಉಸಾಬರಿ ಎಂದೆನಿಸಿತ್ತು. ಆದರೆ ಆ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ, ಲೋಕಾಯುಕ್ತ ಸಂತೋಷ ಹೆಗ್ಡೆ, ನ್ಯಾಯಮೂರ್ತಿ ವೆಂಕಟಾಚಲಯ್ಯ ಮುಂತಾದ ಹಿರಿಯರು ಹಾಜರಿದ್ದ ವೇದಿಕೆಯಲ್ಲಿ ಒಂದು ವಿಶ್ವಾಸ ವ್ಯಕ್ತವಾಗಿತ್ತು. ಅದೆಂದರೆ, ಇಂಥ ಅದೆಷ್ಟೋ ಮಾಫಿಯಾಗಳನ್ನು ಈ ಮಣ್ಣು ಅರೆದು ಮಣ್ಣುಗೂಡಿಸಿದೆ. ಹಾಗಿರುವಾಗ ಈ ಗಣಿ ದೌಲತ್ತು ಸಹ ಈ ಕ್ಷಣದಲ್ಲಿ ನಮ್ಮನ್ನು ಎಷ್ಟೇ ಹೆದರಿಸುತ್ತಲಿದ್ದರೂ, ಇದನ್ನು ಮಟ್ಟ ಹಾಕುವುದು ಸಾಧ್ಯವೇ ಇಲ್ಲ ಎಂಬ ಆತಂಕ ಕಾಡುತ್ತಿದ್ದರೂ ಇದು ಕೇವಲ ಕಾಲದ ಮಾತು ಅಷ್ಟೆ. ಈ ನೆಗೆಟಿವ್ ಫೋರ್ಸ್ ತುಂಬ ದಿನಗಳ ಕಾಲ ನಿಲ್ಲುವುದಿಲ್ಲ.– ಹಾಗಂತ ಧ್ವನಿಗಳು ಕೇಳಿ ಬಂದಿದ್ದವು.



ಅದು ಎಷ್ಟು ಬೇಗ ನಿಜವಾಗಿ ಬಿಟ್ಟಿತು ನೋಡಿ? ಈ ಗಣಿ ವರದಿ ಬರುವುದಕ್ಕೆ ಹಲವು ತಿಂಗಳುಗಳ ಮುಂಚೆಯೇ ಅವರ ಸ್ವಘೋಷಿತ ತಾಯಿ ತಮ್ಮ ಮಾತೃತ್ವದ ಗುತ್ತಿಗೆಯನ್ನು ಅರ್ಧಕ್ಕೆ ಮೊಟಕುಗೊಳಿಸಿದ ವಿಲಕ್ಷಣ ವಿದ್ಯಮಾನವೊಂದು ನಡೆದುಹೋಯಿತು! ಆಗಲೇ ಜಗತ್ತಿಗೆ ಇವರಿಗೆ ಮುಂದೆ ಒದಗಬಹುದಾದ ಸ್ಥಿತಿಯ ಸ್ಪಷ್ಟ ಚಿತ್ರಣ ದೊರಕಿಬಿಟ್ಟಿತ್ತು. ತಮ್ಮ ಮೆರಗು–ಚಾಪುಗಳಿಂದ ಪ್ರತಿದಿನ ಸುದ್ದಿಯ ಕೇಂದ್ರವಾಗಿರುತ್ತಿದ್ದ ರೆಡ್ಡಿಗಳು ಅಲ್ಲಿಂದೀಚೆಗೆ ಹೆಚ್ಚು–ಕಡಿಮೆ ನೇಪಥ್ಯಕ್ಕೆ ಸರಿದುಹೋಗಿದ್ದರು. ಅದಾಗಲೇ ಸುಪ್ರೀಂ ಕೋರ್ಟ್ ಬಳ್ಳಾರಿಯಲ್ಲಿ ಗಣಿಗಾರಿಕೆ ಸ್ಥಗಿತಗೊಳಿಸುವಂತೆ ಆದೇಶ ನೀಡಿದೆ. ಇನ್ನು ಅದರ ಕೈಗೆ ಲೋಕಾಯುಕ್ತರ ವರದಿ ಕೂಡ ಸಿಕ್ಕಿದರೆ ಏನಾಗಬಹುದು ಎಂಬುದನ್ನು ನಾವು ಈಗಲೇ ಊಹಿಸಿಕೊಳ್ಳಬಹುದು. ಈಗ ಕಾನೂನು ಬಲ್ಲವರು ಹೇಳುವ ಪ್ರಕಾರ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಯಡಿಯೂರಪ್ಪನವರಿಗೇ ಕಷ್ಟವಿದೆ, ಇನ್ನು ರೆಡ್ಡಿಗಳ್ಯಾವ ಲೆಕ್ಕ? ಅದೆಷ್ಟು ವ್ಯಾಪ್ತಿಯ ಭೂಮಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಕೋಟಿಗಳ ಲೆಕ್ಕದಲ್ಲಿ ಹಣ ಎಣಿಸಿದರೂ ಕೊನೆಗೊಮ್ಮೆ ಐದು–ಹತ್ತು ಹೆಜ್ಜೆ ಆಚೀಚೆ ನಡೆಯಬಹುದಾದ ಕಾರಾಗೃಹವೇ ಅಂತಿಮ ತಂಗುದಾಣವಾಗುವ ಲಕ್ಷಣವಿದೆ ಎಂದಾದರೆ ಏನು ಸಾಧಿಸಿದಂತಾಯಿತು?



## ತೆರೆದ ಕಿಟಕಿ

■ ಚೈತನ್ಯ ಹೆಗಡೆ

ಉರಿದು ಮೆರೆದವನು ಹೆಸರಿಲ್ಲದವನಂತೆ ಮಣ್ಣಾಗುತ್ತಾನೆ ಎಂಬುದು ಇಲ್ಲಿನ ಪಾಠ. ಇದು ಕೇವಲ ನಮ್ಮ ತೃಪ್ತಿಗೆ ಚಪ್ಪರಿಸಬಹುದಾದ ಸಿದ್ಧಾಂತವಲ್ಲ ಎಂಬುದಕ್ಕೆ ಮೇಲೆ ವಿವರಿಸಿದ ದೃಷ್ಟಾಂತವೇ ಪುರಾವೆ. ಮಣ್ಣಿನ ಬಗ್ಗೆಯೇ ಮಾತಾಡಿ ಜನಮಾನಸದಲ್ಲಿ ಸ್ಥಾನ ಪಡೆದ ಬಿಜೆಪಿ ಇದನ್ನು ಬಹಳ ಮೊದಲೇ ಅರಿತುಕೊಳ್ಳಬೇಕಿತ್ತು. ಆಗ ಯಡಿಯೂರಪ್ಪನವರಿಗೆ ಈ ಐದು ವರ್ಷ ಒಳ್ಳೆಯ, ಪ್ರಾಮಾಣಿಕ ಆಡಳಿತ ಕೊಟ್ಟು ಮತ್ತೆ ಜನರ ಎದುರು ಬರುತ್ತೇವೆ ಎಂಬ ಮಾತು ನೆನಪಾಗುತ್ತಿತ್ತೇ ವಿನಃ ಏನೇ ಆದರೂ ಇನ್ನು 20 ವರ್ಷ ನಾನೇ ಮುಖ್ಯಮಂತ್ರಿ ಎಂಬ ಧೋರಣೆ ಅಧಿಕಾರ ಕೈಗೆಟುಕಿದ ಪ್ರಾರಂಭದಲ್ಲೇ ವ್ಯಕ್ತವಾಗುತ್ತಿರಲಿಲ್ಲ. ಹುದ್ದೆ ಬಿಡದೇ ಬೇರೆ ದಾರಿಯೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿರುವ ಇಂಥ ಸಂದರ್ಭದಲ್ಲೂ ರಾಜಿನಾಮೆಗೆ ಮೊದಲು ನನ್ನ ಬೇಡಿಕೆ ಈಡೇರಿಸಿ ಎಂದು ಹೈಕಮಾಂಡ್ ಜೊತೆ ಗುದ್ದಾಟಕ್ಕೆ ಇಳಿಯುತ್ತಿರಲಿಲ್ಲ. ರೇಣುಕಾಚಾರ್ಯರಂಥ ನೀತಿಗೆಟ್ಟ ಶಾಸಕರನ್ನು ಕಟ್ಟಿಕೊಂಡು ಈ ಕ್ಷಣದಲ್ಲೂ ಪಕ್ಷದಲ್ಲಿ ಬಿರುಕು ತರಬಲ್ಲೆ ಎಂಬ ಸಂದೇಶ ರವಾನಿಸಿ, ಜನರ ಕಣ್ಣಲ್ಲಿ ಇನ್ನಷ್ಟು ಹಗುರಾಗುವ ವರ್ತನೆ ತೋರುತ್ತಲೇ ಇರುತ್ತಿರಲಿಲ್ಲ.

ಕರ್ನಾಟಕ ಬಿಜೆಪಿಯ ಬೆಳವಣಿಗೆಗಳಿಂದ ಆ ಪಕ್ಷದ ನಾಯಕರಿಗೂ ಆಗದಷ್ಟು ತೀವ್ರವಾದ ನೋವನ್ನು ಅನುಭವಿಸುತ್ತಿರುವವನು ಮತದಾರ. 'ಇವರು ಎಲ್ಲರಂತೆ ಅಲ್ಲ' ಎಂಬ ನಂಬಿಕೆಯೇ ಆತನಿಗೆ ಬಿಜೆಪಿ ಬೆಂಬಲಿಸುವುದಕ್ಕೆ ಪ್ರೇರಣೆಯಾಗಿತ್ತು. ಜಡ್ಡುಗಟ್ಟಿದ ವ್ಯವಸ್ಥೆಯಲ್ಲಿ ಪರ್ಯಾಯಕ್ಕೆ ಹಂಬಲಿಸುತ್ತಿದ್ದವರಿಗೆ ರಾಷ್ಟ್ರಮಟ್ಟದಲ್ಲಿ ಆಶಾಕಿರಣವಾಗಿ ಗೋಚರಿಸಿದ ಪಕ್ಷ ಇದು. ಹಾಗಿರುವಾಗ, ಬಿಜೆಪಿ ಏನನ್ನು ಮಾಡುತ್ತದೆಯೋ ಬಿಡುತ್ತದೆಯೋ ಆದರೆ ಒಂದು ಸಂಗತಿಯನ್ನು ಮಾತ್ರ ಅವರಿಂದ ಸಹಿಸಲಾಗುವುದಿಲ್ಲ. ಅದೆಂದರೆ ತಮ್ಮ ತಪ್ಪನ್ನು ಬೇರೆಯವರ ತಪ್ಪುಗಳ ಉದಾಹರಣೆಯ ಮೂಲಕ ಸಮರ್ಥಿಸಿಕೊಳ್ಳುವುದು. ಆದರೆ ದುರಂತವೆಂದರೆ, ಕರ್ನಾಟಕದಲ್ಲಂತೂ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲೇ ಬಿಜೆಪಿ ಇಂಥದೇ ಧಾಟಿಯಲ್ಲಿ ಸಮರ್ಥನೆಗೆ ಇಳಿಯತೊಡಗಿತು. ಯಾವ ಆರೋಪ ಬಂದರೂ ವಿಪಕ್ಷಗಳತ್ತ ತಿರುಗಿ 'ನಿಮ್ಮ ಹೂರಣ ನಮಗೇನು ತಿಳಿದಿಲ್ಲವಾ' ಎಂದೇ ಗುಟುರು ಹಾಕತೊಡಗಿತು. ಇವರಿಗೆ ತಿಳಿಯುವುದೇನು? ಜನರಿಗೆ ಆ ಸತ್ಯ ಗೊತ್ತಿರುವುದರಿಂದಲೇ ಅಲ್ಲವೇ ಇವರನ್ನು ಆರಿಸಿ ತಂದಿದ್ದು? ಪಾಪ, ಬಡವಾಗಿದ್ದೀರಿ ನೀವೂ ದುಡ್ಡು ಮಾಡಿಕೊಳ್ಳಿ ಎಂದಲ್ಲವಲ್ಲ?

ಮತದಾರನಿಗೆ ತುಂಬ ದಿಗಿಲು ಹುಟ್ಟುಹಾಕುತ್ತಿರುವ ಇನ್ನೊಂದು ವಿಚಾರ ಎಂದರೆ ಯಡಿಯೂರಪ್ಪನವರ ವಿಚಾರದಲ್ಲಿ ಬಯಲಾಗಿರುವ ಬಿಜೆಪಿ ಹೈಕಮಾಂಡ್‌ನ ಬಲಹೀನತೆ. ಯಡಿಯೂರಪ್ಪನವರೇ ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಬೆಳೆಸಿದ್ದು, ಹಾಗಾಗಿ ಅವರ ರಾಜಿನಾಮೆ ತೆಗೆದುಕೊಳ್ಳುವುದಕ್ಕೂ ಆಷಾಡ–ಭಾದ್ರಪದ ಎಣಿಸಬೇಕಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿರುವ ಅಂಶ ಅಷ್ಟೆ. ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೆ ಬಿಡಿಗಾಸಿನ ಆಸೆ ಇರಿಸಿಕೊಳ್ಳದ ಎಷ್ಟೋ ಕಾರ್ಯಕರ್ತರು ಬೆವರು ಹನಿಸಿರುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಈಗೆರಡು ಅವಧಿಗಳಿಂದ ಲೋಕಸಭೆಗೆ ಬಿಜೆಪಿ ಅಭ್ಯರ್ಥಿಗಳೇ ನಮ್ಮ ರಾಜ್ಯದಿಂದ ದೊಡ್ಡ ಸಂಖ್ಯೆಯಲ್ಲಿ ಆರಿಸಿಹೋಗುತ್ತಿರುವುದಕ್ಕೆ ಯಡಿಯೂರಪ್ಪ ಜನಪ್ರಿಯತೆ ಬಂಡವಾಳವಾಗಿರಲಿಲ್ಲ. ವಾಜಪೇಯಿ, ಆಡ್ವಾಣಿಯವರಂಥ ಮೇರು ನಾಯಕರು ಹಾಗೂ ಅವರು ಪ್ರತಿಪಾದಿಸುತ್ತಿರುವ ಮೌಲ್ಯಕ್ಕೆ ಆಕರ್ಷಿತರಾಗಿ ನೀಡಿದ ಆಶೀರ್ವಾದ ಅದು. ಅದಿರಲಿ, 'ಬೆಂಕಿಯ ಚೆಂಡು' ಎಂದೇ ಖ್ಯಾತರಾಗಿದ್ದ ಉಮಾ ಭಾರತಿ ಅವರೇ ಅಶಿಸ್ತು ಪ್ರದರ್ಶಿಸಿದರು ಎಂಬ ಕಾರಣಕ್ಕೆ ಉಚ್ಚಾಟನೆಯಾಗಿದ್ದರು. ಬೇರೆ ಪಕ್ಷ ಕಟ್ಟಿ ಬಿಜೆಪಿಗೆ ಪಾಠ ಕಲಿಸಿಬಿಡುತ್ತೇನೆ ಎಂದೇ ಆರ್ಭಟಕ್ಕೆ ಬಿದ್ದ ಅವರು ಇದೀಗ ಮೆತ್ತಗಾಗಿ ಮತ್ತೆ ಪಕ್ಷಕ್ಕೆ ತಿರುಗಿಬಂದರಲ್ಲವೇ? ಇನ್ನು ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿರುವ ಯಡಿಯೂರಪ್ಪನವರ ವಿಷಯದಲ್ಲಿ ಯಾವ ಮುಲಾಜು?

ಈ ಹಂತದಲ್ಲೇ ಬಿಜೆಪಿ ಬಗ್ಗೆ ಗಾಬರಿ ಹುಟ್ಟುತ್ತದೆ. ಅಶಿಸ್ತಿನ ಕಾರಣಕ್ಕೂ ಉನ್ನತ ನಾಯಕರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದ ಅವತ್ತಿನ ಬಿಜೆಪಿ ಹೈಕಮಾಂಡ್‌ಗೆ ಇದ್ದ ಧಾಡಸಿತನ ಇಂದಿನವರಿಗೇಕಿಲ್ಲ? ಉತ್ತರ ಸ್ಪಷ್ಟ. ಅಂದಿನವರಿಗಿದ್ದ ನೈತಿಕ ನೆಲೆಗಟ್ಟು ಇಂದಿನವರಿಗಿಲ್ಲ. ಎನ್‌ಡಿಎ ಅಧಿಕಾರಕ್ಕೆ ಬಂದರೆ ಪ್ರಧಾನಿ ಹುದ್ದೆಗೆ ಸಂಭಾವ್ಯ ಉಮೇದುವಾರರಲ್ಲಿ ಒಬ್ಬರಾದ ಸುಷ್ಮಾ ಸ್ವರಾಜ್ ಅವರಂಥವರೇ ಗಣಿ ರಾಜಕಾರಣವನ್ನು ಅಪ್ಪಿ ಮುದ್ದಾಡಿದವರು ಎಂದಾದಾಗ ರಾಜ್ಯದ ಮುಖ್ಯಮಂತ್ರಿಗಳಿಗೆ ಗದರಿಸಿ ಹೇಳುವ ಶಕ್ತಿ ಬಂದೀತಾದರೂ ಎಲ್ಲಿಂದ?

ಸ್ವಾತಂತ್ರ್ಯದ ನಂತರ ರಾಷ್ಟ್ರದಲ್ಲಿ ಹಲ ದಶಕಗಳ ಕೆಟ್ಟ ಆಡಳಿತಕ್ಕೆ ಉತ್ತರ ಕಂಡುಕೊಳ್ಳಲು ಬಿಜೆಪಿ ಕಡೆ ಮುಖ ಮಾಡಿದ್ದ ಮತದಾರನಿಗೆ ಕಠೋರ ವಾಸ್ತವವೊಂದು ಇರಿಯುತ್ತಿದೆ. ಅದೆಂದರೆ ಬಿಜೆಪಿ ಈಗ ಆಡ್ವಾಣಿಯಂಥ ಸ್ಟೇಟ್ಸ್‌ಮನ್‌ಗಳ ಜಮಾನಾದಿಂದ ನಿತಿನ್ ಗಡ್ಕರಿ ಅವರಂಥ ಬಿಸಿನೆಸ್‌ಮನ್‌ಗಳ ಕಾಲಕ್ಕೆ ಜಾರುತ್ತಿದೆ. ಒಬ್ಬ ರಾಜನೀತಿಜ್ಞ ಮುಂದಿನ ತಲೆಮಾರಿನ ಬಗ್ಗೆ ಯೋಚಿಸಿದರೆ, ಉದ್ಯಮಿ ಇವತ್ತಿನ ಲಾಭದ ಲೆಕ್ಕಾಚಾರದಲ್ಲಿರುತ್ತಾನೆ. ಹಿಂದೆಲ್ಲ ಬಿಜೆಪಿ ಟಿಕೆಟ್ ಸಿಗಬೇಕೆಂದರೆ ಆರೆಸ್ಸೆಸ್‌ನಲ್ಲಿ ಸೇವಾಕಾರ್ಯ ಮಾಡಿ ಸೈ ಎನಿಸಿಕೊಂಡಿರಬೇಕು ಎಂಬ ಕಾಲ ಹೋಗಿ ಹಣದ ಚೀಲ ತಂದವರಿಗೆ ಉಘೇ ಎನ್ನುತ್ತಿರುವುದೇ ಇದಕ್ಕೆ ದ್ಯೋತಕ.

ನಿಜ. ತತ್ವಾಧಾರಿತ ರಾಜಕಾರಣ ಮಾಡಿದ ಬಿಜೆಪಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿರುವುದು ಸಾಧ್ಯವಾಗದೇ ಇದ್ದಿರಬಹುದು. ಆದರೆ ಅನೇಕ ರಾಜ್ಯಗಳಲ್ಲಿ ಅದು ಅಧಿಕಾರದಲ್ಲಿದೆ. ಕರ್ನಾಟಕ ಹೊರತುಪಡಿಸಿದರೆ ಬೇರೆಡೆ ಒಳ್ಳೆಯ ಇಮೇಜ್ ಇದೆ. ಆ ವಾಸ್ತವದಿಂದ ಸ್ಫೂರ್ತಿ ಪಡೆಯುವುದು ಬಿಜೆಪಿಗೆ ಸಾಧ್ಯವಾಗುತ್ತಿಲ್ಲವೇ? ಸಿದ್ಧಾಂತದ ಬಗ್ಗೆ ವಾದ–ಪ್ರತಿವಾದಗಳಿದ್ದಾಗಿಯೂ ಆಡ್ವಾಣಿ, ಮುರಳಿ ಮನೋಹರ ಜೋಶಿ ಮುಂತಾದವರನ್ನು ದೇಶ ಗೌರವಿಸುತ್ತಿರುವುದು, ಅವರು ಮಾತಿಗೆ ನಿಂತರೆ ಆಸಕ್ತಿಯಿಂದ ಕೇಳಿಸಿಕೊಳ್ಳುವುದು ಏಕೆ? ಅವರು, ಅವರ ಮಕ್ಕಳು ಭಾರಿ ಉದ್ಯಮಗಳಲ್ಲಿ ತೊಡಗಿಕೊಂಡಿಲ್ಲವಲ್ಲ? ಕಣ್ಣಿಗೆ ಕುಕ್ಕುವ ವೈಭೋಗದಲ್ಲೂ ಅವರು ಬದುಕುತ್ತಿಲ್ಲ. ಆದರೂ ರಥಯಾತ್ರೆಯಿಂದ ದೇಶದ ರಾಜಕಾರಣದ ದಿಕ್ಕು ಬದಲಿಸಿದ ಆಡ್ವಾಣಿಯವರನ್ನು ಮುಂದಿನ ತಲೆಮಾರೂ ಜ್ಞಾಪಿಸಿಕೊಳ್ಳುತ್ತದೆ. ಲಾಲ್‌ಚೌಕದಲ್ಲಿ ತ್ರಿವರ್ಣ ಹಾರಿಸಿಬಂದ ಜೋಶಿಯವರ ಕೆಚ್ಚಿನ ಕತೆಯನ್ನು ನಾವು ಮುಂದಿನವರಿಗೂ ಹೇಳುತ್ತೇವೆ.

ಹಣವನ್ನು ಮೀರಿದ ನೈತಿಕ ಶಕ್ತಿಯ ನೆನವರಿಕೆ ಇನ್ನಾದರೂ ಆದೀತೇ ಬಿಜೆಪಿಗೆ? ಇವೆಲ್ಲ ಟೀಕೆಯ ಮಾತುಗಳಲ್ಲ. ಬಿಜೆಪಿಯ ಮೇಲೆ ಪ್ರೀತಿ ಇರಿಸಿಕೊಂಡ ಪ್ರತಿಯೊಬ್ಬ ಮತದಾರನ ಒಡಲಾಳ.

# ಗುಡಿಸಲಿನ ಇರುಳಲ್ಲಿ ಇಣಕುತ್ತಾನೆ ಸೂರ್ಯ!

**ಕ**ನ್ನಡಿಗರಿಗೆ ಹಂಡೆ ಹಾಲು ಕುಡಿದಷ್ಟು ಸಂತಸವಾಗಿದೆ !

ನಿಮ್ಮ ಊಹೆ ತಪ್ಪು. ಈ ಸಂತಸ, ಕೊನೆಗೂ ಯಡಿಯೂರಪ್ಪ ನೇತೃತ್ವದ ಸರಕಾರ ಕೊನೆಗೊಳ್ಳುತ್ತಿರುವುದಕ್ಕಾಗಿಯಾಗಲೀ, ಗಣಿ ಭ್ರಷ್ಟಾಚಾರದ ಬಗೆಗೆ ಸಮರ್ಥ ತನಿಖೆ ನಡೆಸಿ ವರದಿ ಸಲ್ಲಿಸಿದ ಲೋಕಾಯುಕ್ತರ ಕಾರ್ಯಕ್ಷಮತೆಯ ಕುರಿತಾಗಿಯಾಗಲೀ, ರಾಜಕೀಯ ದೊಂಬರಾಟಕ್ಕೆ ಅಂತೂ ತೆರೆ ಬೀಳುತ್ತಿದೆ ಎಂಬುದಕ್ಕಾಗಲೀ ಅಲ್ಲ. ರಾಜಕಾರಣಿಗಳ ಇಂಥ ಪ್ರಹಸನ ಮುಗಿಯದ ಅಧ್ಯಾಯ. ಗಣಿ ಕೆಸರನ್ನು ಅವರು ಪರಸ್ಪರ ರಾಚಿಕೊಳ್ಳುತ್ತಲೇ ಇರುತ್ತಾರೆ ಬಿಡಿ. ಹಾಳಾಗಿ ಹೋಗಲಿ.

ಕನ್ನಡಿಗ ಪುಳಕಿತನಾದದ್ದು ರಾಜ್ಯದಲ್ಲಿ ಇಂಥ ನಿರಾಶಾದಾಯಕ ಬೆಳವಣಿಗೆಗಳ ಅಬ್ಬರದ ನಡುವೆ ಮಾಧ್ಯಮಗಳಲ್ಲಿ ಒಳಪುಟ ಸೇರಿಯೂ ಗಮನ ಸೆಳೆದ ಸುದ್ದಿಯೊಂದರಿಂದ, ಮಹತ್ತರ ಸಾಧಕನೊಬ್ಬನಿಗೆ ಸಂದ ಗೌರವದಿಂದ. ಆಗಲೇಬೇಕು. ಏಕೆಂದರೆ, ಮತ್ತೊಮ್ಮೆ ವಿಶ್ವದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ, ಏಷ್ಯಾದ ನೋಬೆಲ್ ಎಂದೇ ಖ್ಯಾತವಾದ ಮ್ಯಾಗ್ಸೆಸ್ಸೆ ಪ್ರಶಸ್ತಿ ಈ ಬಾರಿ ಹೆಮ್ಮೆಯ ಕನ್ನಡಿಗ ಡಾ. ಹರೀಶ್ ಹಂದೆಯವರಿಗೆ ಸಂದಿದೆ.

ಹಿಂದೊಮ್ಮೆ, ಸ್ವತಃ ಹಂದೆಯವರೇ ನನ್ನೆದುರು ನೀರಿನ ಪರವಾದ ಕೆಲಸಗಳ ಬಗ್ಗೆ ಹೆಮ್ಮೆಯ ಮಾತನಾಡುತ್ತಲೇ ಸೂರ್ಯ ಶಕ್ತಿಯ ಅಪವ್ಯಯದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು– 'ಒಂದೊಮ್ಮೆ ನೀರು ಇಲ್ಲವೆಂದರೆ ಚಿಂತಿಸುವ ಅಗತ್ಯವಿಲ್ಲ. ಏಕೆಂದರೆ ಈ ಭೂಮಿಯ ಮೇಲೆ ಅಂದಿನಿಂದ ಇಂದಿನವರೆಗೂ ಮಳೆ ಬೀಳುತ್ತಲೇ ಇದೆ. ಭೂಮಿಯಲ್ಲಿ ನೀರು ಖಾಲಿಯಾದರೆ ಮಳೆಯಿಂದ ಅದನ್ನು ಮತ್ತೆ ದಕ್ಕಿಸಿಕೊಳ್ಳಬಹುದು. ಆದರೆ ಬಿಸಿಲು, ಸೂರ್ಯ ಶಕ್ತಿ ಹಾಗಲ್ಲ. ಅದಕ್ಕೆ ಪರ್ಯಾಯವೆಂಬುದೇ ಇಲ್ಲ. ಒಂದೇ ಒಂದು ದಿನ ಸೂರ್ಯನ ಬೆಳಕೇ ಈ ಭೂಮಿಯ ಮೇಲೆ ಬೀಳಲಿಲ್ಲವೆಂದಾದರೆ ಜಗತ್ತು ಅಲ್ಲೋಲಕಲ್ಲೋಲವಾಗಿ ಬಿಡುತ್ತದೆ. ದುರದೃಷ್ಟವೆಂದರೆ ಅಂಥ ಶಕ್ತಿಯ ಮೌಲ್ಯವನ್ನು ಈವರೆಗೆ ಅರ್ಥ ಮಾಡಿಕೊಂಡಿಲ್ಲ...

ಬಹುಶಃ ಆ ಸಂದರ್ಭದಲ್ಲಿ ಹಂದೆಯವರ ಮಾತಿನ ಅರ್ಥ ಪೂರ್ತಿಯಾಗಿ ಆಗಿರಲಿಲ್ಲವೇನೋ. ಆದರೆ ಕಳೆದ ಬೇಸಿಗೆಯ ನಂತರ ಸರಿ ಸುಮಾರು ವರ್ಷ ಪೂರ್ತಿ ರಾಜ್ಯ ಅನುಭವಿಸಿದ, ಇತ್ತೀಚಿನ ವರ್ಷಗಳಲ್ಲಿ ರಾಜ್ಯವನ್ನು ಬಿಡದೇ ಕಾಡುತ್ತಿರುವ ವಿದ್ಯುತ್ ಕೊರತೆಯ ಸನ್ನಿವೇಶದಲ್ಲಿ ನೆನಪಾದದ್ದು ಹಂದೆಯವರು. ರಾಜ್ಯವನ್ನು ಇನ್ನಿಲ್ಲದಂತೆ ಕಾಡಿದ ವಿದ್ಯುತ್ ವ್ಯತ್ಯಯ, ಅದನ್ನು ಸಂಭಾಳಿಸಲಾರದೇ ಪರದಾಡಿದ ಆಡಳಿತ ವ್ಯವಸ್ಥೆಯನ್ನು ಗಮನಿಸಿದಾಗ ತಂತ್ರಜ್ಞಾನದಲ್ಲಿ ಅಪಾರ ಸುಧಾರಣೆಯನ್ನು ಸಾಧಿಸಿರುವ ಮನುಷ್ಯ ಇಂದಿಗೂ ನಿಸರ್ಗದೆದುರು ಅಸಹಾಯಕನೇ ಎಂಬ ಅಂಶ ವಿಸ್ಮೃತಿ ಸರಿದು ಎದ್ದು ಬರುತ್ತದೆ.

ದೇಶದ ನಿವ್ವಳ ಆದಾಯ ಹೆಚ್ಚುತ್ತಲೇ ಇದೆ. ದಿನದಿಂದ ದಿನಕ್ಕೆ ನಾವು ಅಭಿವೃದ್ಧಿ ಹೊಂದುತ್ತಲೇ ಇದ್ದೇವೆ ಎಂಬ ಅಂಕಿಅಂಶಗಳ ಮಾರುದ್ದದ ಪಟ್ಟಿಯನ್ನು ಬಿಡುಗಡೆಮಾಡುತ್ತಲೇ ಬರುತ್ತಿದ್ದೇವೆ. ಆದರೆ ಅದೇ ಸಮಯಕ್ಕೆ ದೇಶದ ಬಡವರ ಸಂಖ್ಯೆಯಲ್ಲೂ ಹೆಚ್ಚಳ ಕಂಡು ಬರುತ್ತಿದೆ. ಏಕೆ ಹೀಗೆ ಎಂಬುದಕ್ಕೆ ಕಾರಣ ಹುಡುಕುತ್ತಾ ಹೋದರೆ ಬಡವರ ಹೆಸರಿನ ಸಬ್ಸಿಡಿಯಲ್ಲಿ ಶ್ರೀಮಂತ ಬದುಕುತ್ತಿದ್ದಾನೆ. ಆತನ ಬೊಕ್ಕಸ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಗುತ್ತಿದೆ. ಅದಕ್ಕೆ ತಕ್ಕಂತೆ ಅಂಥ ಶ್ರೀಮಂತರ ವ್ಯವಹಾರಗಳಲ್ಲಿ, ಅವರು ನಡೆಸುತ್ತಿರುವ ಉದ್ದಿಮೆಗಳಲ್ಲಿ ನಿಸರ್ಗ ಸಿಲುಕಿ ನಲುಗುತ್ತಿದೆ. ಜೀವ ವೈವಿಧ್ಯ ಕಣ್ಮರೆಯಾಗುತ್ತಿದೆ. ದೇಶದ ಸಂಪತ್ತಿನ ಲೆಕ್ಕಕ್ಕೆ ಕುಳಿತರೆ, ಅಭಿವೃದ್ಧಿಯ ಮಾನದಂಡದ ಸಂದರ್ಭದಲ್ಲಿ ಇಲ್ಲಿನ ನಿಸರ್ಗದ ನಾಶ, ಶಕ್ತಿಯ ಅಪವ್ಯಯವನ್ನು ಪರಿಗಣಿಸುತ್ತಲೇ ಇಲ್ಲ. ಅಭಿವೃದ್ಧಿಯೆಂದರೆ ನಮ್ಮಲ್ಲಿ ಅದು ನಗರ ಕೇಂದ್ರಿತ, ಬೆಳವಣಿಗೆ ಎಂದರೆ ಅದು ಶ್ರೀಮಂತ ಕಂಪನಿಗಳ ವಾರ್ಷಿಕ ಗ್ರಾಫ್‌ನಲ್ಲಿನ ಏರಿಕೆ, ಸೌಲಭ್ಯಗಳ ಪೂರೈಕೆ ಎಂದರೆ ಅದು ಸೀಮಿತ ವ್ಯಕ್ತಿಗಳ ಭಾಗ್ಯ. ಮಣ್ಣಿನ ಪೋಷಕಾಂಶಗಳ ಹಾನಿ, ಅರಣ್ಯ ನಾಶ, ನೀರಿನ ಮಾಲಿನ್ಯ, ಬಿಸಿಲಿನ ಪೋಲು, ಪವನ ಶಕ್ತಿಯ ಅಪವ್ಯಯ ಹಾಗೂ ಇವೆಲ್ಲದರ ಜತೆಗೆ ಕನಿಷ್ಠ ಮೂಲ ಸೌಕರ್ಯಕ್ಕಾಗಿ ಹೆಣಗಾಡುವ ಬಡವನ ಶ್ರಮ ಇದ್ಯಾವುದನ್ನೂ ನಾವು ನಮ್ಮ ನಿವ್ವಳ ಆದಾಯ ಅಥವಾ ನಷ್ಟದಲ್ಲಿ ಪರಿಗಣಿಸುತ್ತಲೇ ಇಲ್ಲ.



ಇಂಥ ವಿಚಾರಗಳನ್ನು ಹಂದೆಯವರು ಕಳೆದ ಹದಿನಾರು ವರ್ಷಗಳಿಂದ ನಿರರ್ಗಳವಾಗಿ ಹೇಳುತ್ತಲೇ ಬಂದಿದ್ದಾರೆ. ಬರೀ ಮಾತನಾಡಿಲ್ಲ. ತಾವು ಸ್ಥಾಪಿಸಿದ, ನಾಡಿನ ಬಡವರು ಗ್ರಾಮೀಣರ ಬದುಕಿನ ಆಶಾಕಿರಣವೆನಿಸಿದ ಸೆಲ್ಕೋ ಸೋಲಾರ್ ಸಂಸ್ಥೆಯ ಮೂಲಕ ಬಹಳಷ್ಟನ್ನು 'ನೋಡಿ ಅಭಿವೃದ್ಧಿ ಎಂದರೆ ಇದು' ಎಂದು ನಮ್ಮ ಕಣ್ಣೆದುರೇ ಮಾಡಿತೋರಿಸುತ್ತಲೂ ಬಂದಿದ್ದಾರೆ. ಇಂದಿನವರೆಗೂ ಅವರು ಏನು ಹೇಳುತ್ತಿದ್ದಾರೆಂಬುದು ನಮಗೆ ಅರ್ಥವಾಗುತ್ತಲೇ ಇರಲಿಲ್ಲ. ಏಕೆಂದರೆ ನಮ್ಮ ಕಿವಿಗಳು ಬಿಸಿಲ ತಾಪವನ್ನು 'ತಣಿಸುವ' ಏರ್ ಕಂಡೀಶನರ್‌ಗಳ ಶಬ್ದದಲ್ಲಿ ಕಿವುಡಾಗಿತ್ತು. ನಮ್ಮ ದೃಷ್ಟಿ ಸೋಮಾರಿತನವನ್ನು ಪೋಷಿಸುತ್ತಿರುವ ಫ್ರೀಜರ್‌ನಿಂದ ಮರಗಟ್ಟಿ ಹೋಗಿತ್ತು. ನಮ್ಮ ಬುದ್ಧಿ ಐಷಾರಾಮಿಯ ಪ್ರತೀಕವಾದ ಕಾರಿನ ದಟ್ಟ ಹೊಗೆಯಿಂದ ಮಂದವಾಗಿತ್ತು. ವಿಕಿರಣಗಳನ್ನು ಹೊರಸೂಸುತ್ತಿರುವ ಇಂಥವೇ ಅತ್ಯಾಧುನಿಕ ಉಪಕರಣಗಳ ಅಬ್ಬರದಲ್ಲಿ ನೀರು ಉಳಿಸಿ, ಬಿಸಿಲು ಬಳಸಿ ಎಂಬಿತ್ಯಾದಿ ಮಾತುಗಳನ್ನು ಕೇಳಲು ವ್ಯವಧಾನವಾದರೂ ಎಲ್ಲಿದೆ?



## ಹೊಸ ಬೆಳಕು

■ ರಾಧಾಕೃಷ್ಣ ಎಸ್. ಭಡ್ತಿ

ಇವತ್ತು ಹಂದೆಯವರಿಗೆ ಮ್ಯಾಗ್ಸೆಸ್ಸೆ ಸಂದಿದೆ. ಈ ಪ್ರಶಸ್ತಿಗೆ ಅತ್ಯಂತ ಅರ್ಹ ವ್ಯಕ್ತಿ ಅವರೆಂಬುದರಲ್ಲಿ ಅನುಮಾನವಿಲ್ಲ. ಗ್ರಾಮೀಣರ ಜೀವನ ಸುಧಾರಣೆ, ಬಡವರ ಸ್ವಾವಲಂಬನೆ, ಪರಿಸರ ಪೂರಕ ಹೆಜ್ಜೆಗಳು ಇತ್ಯಾದಿ ದೃಷ್ಟಿಕೋನದಿಂದ ನೋಡಿದಾಗ ಹಂದೆಯವರ ಬಗ್ಗೆ ಇನ್ನಿಲ್ಲದ ಹೆಮ್ಮೆ ಮೂಡುತ್ತದೆ. ಅವರ ದೂರದರ್ಶಿ ಚಿಂತನೆಗಳು ಹಾಗೂ ಯೋಚನಾ ಮಟ್ಟದ ಅರಿವು ಈವರೆಗೆ ನಮ್ಮಗಾಗಲೀ ನಮ್ಮ ಸರಕಾರಕ್ಕಾಗಲೀ ಆಗದಿರುವುದು ದುರಂತ. ಹಾಗೆ ನೋಡಿದರೆ ಜಗತ್ತಿನ ದೊಡ್ಡಣ್ಣ ಅಮೆರಿಕ ಹಂದೆಯವರ ಭೌದ್ಧಿಕ ಸಂಪತ್ತಿನ ಪ್ರಯೋಜನ ಪಡೆದಿದೆ. ಈಗಾಗಲೇ ವಿಶ್ವದ ಮೂವತ್ತಕ್ಕೂ ಹೆಚ್ಚು ದೇಶವನ್ನು ಅವರು ಸುತ್ತಿ ತಮ್ಮ ಅಮೂಲ್ಯ ಸಲಹೆಗಳನ್ನು ಧಾರೆ ಎರೆದಿದ್ದಾರೆ. ಇವತ್ತಿಗೂ ಅಮೆರಿಕ ಅಧ್ಯಕ್ಷ ಒಬಾಮ ನೇರವಾಗಿ ದೂರವಾಣಿಯಲ್ಲಿ ಸಂಪರ್ಕಿಸುವಷ್ಟು ಸಲುಗೆ ಇದೆ ಎಂದರೆ ಅದು ಹಂದೆಯವರ ಬುದಿಮತ್ತೆಯಿಂದ ಮಾತ್ರ. ಒಬಾಮ ಭಾರತಕ್ಕೆ ಬಂದಿದ್ದ ಸಂದರ್ಭದಲ್ಲಿ ಆಹ್ವಾನಿಸಿದ್ದ ದೇಶದ ಆಯ್ದ 100 ಗಣ್ಯರಲ್ಲಿ ಹಂದೆಯವರೂ ಒಬ್ಬರಾಗಿದ್ದರು. ಮಾತ್ರವಲ್ಲ, ಒಬಾಮ ಎದುರು ಮೂರು ನಿಮಿಷಗಳ ಕಾಲ ತಮ್ಮ ವಿಚಾರವನ್ನು ಮಂಡಿಸಲು ಅವಕಾಶ ಪಡೆದ 20 ಅತಿ ಪ್ರಮುಖ ಮೇಧಾವಿಗಳಲ್ಲಿ ಹಂದೆಯವರ ಹೆಸರು ಮೊದಲ ಸಾಲಿನಲ್ಲಿತ್ತು. ಆ ಮೂರು ನಿಮಿಷವನ್ನು ಅವರು ಅತ್ಯಂತ ಅರ್ಥಪೂರ್ಣವಾಗಿ ಬಳಸಿಕೊಂಡು 'ಭಾರತದ ಇಂಥ ದೂರದರ್ಶಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಮೆರಿಕವೂ ಮುಂದಾಗಬೇಕು' ಎಂದು ಪ್ರತಿಪಾದಿಸಿದ್ದರು. ಆ ಮೂಲಕ ಎರವಲು ಜ್ಞಾನವನ್ನಷ್ಟೇ ಪಡೆಯಲು ಭಾರತೀಯರು ಇರುವುದಲ್ಲ ಎಂಬ ಮಹತ್ವದ ವಿಷಯವನ್ನು ಅತ್ಯಂತ ದಿಟ್ಟವಾಗಿ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಭಾರತದ ಗ್ರಾಮೀಣ ಪ್ರದೇಶದಲ್ಲಿನ ಬಡಜನರ ಬೆಳಕಿನ ಬವಣೆಯನ್ನು ಅರಿತು, ಇದಕ್ಕೊಂದು ಶಾಶ್ವತ ಪರಿಹಾರವನ್ನು ಹುಡುಕಲೇ ಬೇಕೆಂಬ ದೃಢ ನಿರ್ಧಾರ ತಳೆದು ಹೊರಟವರು ಹಂದೆಯವರು. ಇಂಥ ಗುರಿ ಸಾಧನೆಗೆ ಅವರು 1995ರಲ್ಲಿ ಹುಟ್ಟು ಹಾಕಿದ್ದೇ ಸೆಲ್ಕೋ ಸೋಲಾರ್ ಸಂಸ್ಥೆಯನ್ನು. ಅಮೆರಿಕದ ಮೆಸಾಚುಸೆಟ್ಸ್ ವಿವಿಯಲ್ಲಿ ಸ್ನಾತಕೋತ್ತರ ಅಧ್ಯಯನ ನಿರತರಾಗಿದ್ದಾಗಲೇ ಅವರನ್ನು ಸೌರ ವಿದ್ಯುತ್ ವಿಷಯ ಕಾಡುತ್ತಿತ್ತು. ಅದರಲ್ಲೇ ಹೆಚ್ಚಿನ ಸಂಶೋಧನೆಯನ್ನು ಕೈಗೊಂಡರು. ಅಮೆರಿಕ ಮತ್ತು ಶ್ರೀಲಂಕಾದಲ್ಲೂ ಸಂಶೋಧನೆ ಮುಂದುವರಿಯಿತು. ಆಗ ಅವರಿಗೆ ಅನಿಸಿದ್ದು ಭಾರತದ ಬಡವರ ಬದುಕಿನ ಕತ್ತಲೆಯನ್ನು ನೀಗಿಸಲೇಬೇಕೆಂಬುದು. ಸೆಲ್ಕೋದಿಂದ ಅದನ್ನು ಆಂದೋಲನವಾಗಿಸಿದರು. ಕರ್ನಾಟಕ, ಕೇರಳ, ಗುಜರಾತ್ ರಾಜ್ಯದಲ್ಲಿ ಸುಮಾರು 1 ಲಕ್ಷ, 25 ಸಾವಿರ ಬಡ ಕುಟುಂಬಗಳನ್ನು ಈಗ ಬೆಳಗಿಸಿದೆ ಸೆಲ್ಕೋ. ಗ್ರಾಮೀಣ ವಿದ್ಯುತ್ ಸ್ವಾವಲಂಬನೆಯ ನಿಟ್ಟಿನಲ್ಲಿ ಇವತ್ತಿನ ಸನ್ನಿವೇಶದಲ್ಲಿ ಅವರ ಸಾಧನೆ ಕಡಿಮೆಯೇನಲ್ಲ.

ಒಂದೆಡೆ ವಿದ್ಯುತ್ ಕೊರತೆ ಮತ್ತೊಂದೆಡೆ ಉತ್ಪಾದನಾ ಮಾರ್ಗಗಳೆಲ್ಲವೂ ಒಂದಲ್ಲಾ ಒಂದು ರೀತಿಯಲ್ಲಿ ಪರಿಸರಕ್ಕೆ ಮಾರಕವಾಗಿವೆ. ಜಲವಿದ್ಯುತ್ ಕೇಂದ್ರಗಳು ನಮ್ಮ ಅರಣ್ಯ ಸಂಪತ್ತನ್ನು ನುಂಗಿ ಹಾಕುತ್ತಿವೆ. ಇನ್ನು ಪರಮಾಣು ಸ್ಥಾವರಗಳಿಂದ ಹೊರಸೂಸುವ ವಿಕಿರಣ ವಾಯುಮಂಡಲವನ್ನೇ ಮಲಿನಗೊಳಿಸುತ್ತಿದೆ. ಪ್ಲುಟೋನಿಯಂನಂಥ ದ್ರವ್ಯಗಳು ಅತ್ತ ಕರಗದೇ, ಇತ್ತ ಉಳಿಯದೇ ಸಾವಿರಾರು ವರ್ಷಗಳವರೆಗೆ ವಿಕಿರಣವನ್ನು ಹೊರಸೂಸುತ್ತಲೇ ಇರುತ್ತವೆ. ಕ್ಯಾನ್ಸರ್‌ನಂಥ ಮಾರಕ ಕಾಯಿಲೆಗಳು ಇದರ ಫಲಶ್ರುತಿಯೇ. ಇನ್ನು ಪರಮಾಣು ತ್ಯಾಜ್ಯಗಳ ವಿಲೇವಾರಿಯಿಂದ ಆಗುತ್ತಿರುವ ಹಾನಿಯನ್ನು ಲೆಕ್ಕ ಹಾಕಲೇ ಸಾಧ್ಯವಿಲ್ಲ. ಯೂರೇನಿಯಂ, ಥೋರಿಯಂಗಳ ಪರಿಣಾಮ ಏನೆಂಬುದು ಈಗಾಗಲೇ ಜಗತ್ತಿಗೆ ಮನವರಿಕೆಯಾಗಿದೆ. ಇಂಧನ ಸಂಸ್ಕರಣಾ ಘಟಕಗಳ ಕೊಡುಗೆಗಳಿವು. ಈ ಹಿನ್ನೆಲೆಯಲ್ಲಿ ನೋಡಿದಾಗ ಹಂದೆಯವರು ಸೌರಶಕ್ತಿ ಕ್ಷೇತ್ರದಲ್ಲಿ ನಡೆಸಿರುವ ಕ್ರಾಂತಿ ಖಂಡಿತಾ ಯಾವುದೇ ದೂರದೃಷ್ಟಿಯ ಯುವ ನಾಯಕನಿಗೆ ಕಡಿಮೆಯದ್ದಲ್ಲ. ಆ ಎಲ್ಲ ಲಕ್ಷಣಗಳು ಹಂದೆಯವರಲ್ಲಿದೆ. 21ನೇಶತಮಾನದ ಪುರೋಗಾಮಿ ಉದ್ಯಮಿಗಳಲ್ಲಿ ಹಂದೆಯವರು ಖಂಡಿತಾ ಅಗ್ರ ಸಾಲಿನಲ್ಲಿ ನಿಲ್ಲುತ್ತಾರೆ.

ನಮ್ಮ ಯುವ ಆಶಾಕಿರಣ ಹಂದೆಯವರೇ, ಹ್ಯಾಟ್ಸ್ ಆಫ್ ಟು ಯು !

## ಪದ ಪದರ

ವಿಶ್ವನಾಥ ಸುಂಕಸಾಳ



### ಸ್ಟೆತೆಸ್ಕೋಪು

- ಹೃದಯಸ್ಪರ್ಶಿ ಸಾಧನ
- ಡಾಕ್ಟರ್ ಎಂದು ಬೇರೆಯವರೆದುರಿಗೆ ಸ್ಕೋಪ್ ತೆಗೆದುಕೊಳ್ಳಲು ಕೆಲವರು ಕುತ್ತಿಗೆಗೆ ಹಾಕಿಕೊಳ್ಳುವ ವಸ್ತು
- ಎದೆಬಡಿತ ನಿಂತಿದೆಯೋ ಅಥವಾ ಓಡುತ್ತಿದೆಯೋ ಎಂದು ಇದರಿಂದ ಕೇಳಬಹುದಂತೆ
- ಹೃದಯ ಕರಗುವಂಥ ಚಲನಚಿತ್ರಕ್ಕೆ ಇದೇ ಸೂಕ್ತ ಹೆಸರು
- ಹಳೆಕಾಲದ ವೈದ್ಯಕೀಯ ಸಾಧನ
- ಹುಡುಗಿಯರ ಹೃದಯ ಅರಿಯಲು ಇದರಿಂದಲೂ ಸಾಧ್ಯವಿಲ್ಲ

## ಕಿರುನಗೆ

**ಮರಿಕೋಲ್ಯ:** ಅಪ್ಪಾ, ಅಡಲ್ಟ್ ಜೋಕ್ ಅಂದ್ರೇನಪ್ಪ?

**ಕೋಲ್ಯ:** ಯಾವ ಜೋಕ್ 18 ವರ್ಷಗಳಷ್ಟು ಹಳೇದಾಗಿರುತ್ತೋ ಅದು...!

***

ಕೋಲ್ಯ ಮತ್ತು ಫಂಟಾ ಈಜಿಪ್ಟಿಗೆ ಹೋದ್ರು. ಅಲ್ಲಿ ಒಂದು ಪಿರಮಿಡ್ ಒಳಗೆ ಮಮ್ಮಿ ನೋಡುವ ಅವಕಾಶ ಸಿಕ್ತು. ನೋಡ್ತಾ...

**ಕೋಲ್ಯ:** ನೋಡೋ ಇಷ್ಟೊಂದು ಬ್ಯಾಂಡೇಜ್‌ಗಳು. ಖಂಡಿತಾ ಇದು ಟ್ರಕ್ ಆ್ಯಕ್ಸಿಡೆಂಟು...

**ಫಂಟಾ:** ಟ್ರಕ್ ನಂಬರ್ ಕೂಡಾ ಬರ್ದಿದ್ದಾರೆ ಕಣೋ ಬಿಸಿ–1760!